# ಪಾಂಚಾಲಿ

■ ಕುಮುದಾ ಪುರುಷೋತ್ತಂ



ಕಾಂಪಿಲ್ಯ ನಗರದ ಅರಮನೆಗೆ ಹೊಂದಿಕೊಂಡಂತಿತ್ತು ಆ ಉದ್ಯಾನವನ. ರುಚಿ ರುಚಿಯಾದ ಹಣ್ಣುಗಳಿಂದ ತೊನೆಯುತ್ತಿದ್ದ ಮರಗಳು, ಸುಗಂಧ ಸೂಸುವ ವರ್ಣರಂಜಿತ ಹೂಗಳು, ಅವುಗಳ ಸುತ್ತ ಸಂಭ್ರಮದಿಂದ ಹಾರುತ್ತಿದ್ದ ಪಾತರಗಿತ್ತಿಗಳು ಮತ್ತು ಗಿಣಿಹಿಂಡುಗಳು ಋತು ವಸಂತಾಗಮನವನ್ನು ಸಾರುತ್ತಿದ್ದರೂ ಅಲ್ಲಿಯೇ ಇದ್ದ ಪಾಂಚಾಲಿಗೆ ಅದರ ಅರಿವಿದ್ದಂತಿರಲಿಲ್ಲ. ಎತ್ತರದ ಮರಕ್ಕೆ ಕಟ್ಟಿದ್ದ ಉಯ್ಯಾಲೆಯಲ್ಲಿ ಕುಳಿತವಳು ಕಾಲನ್ನು ನೆಲಕ್ಕೆ ಚಿಮ್ಮಿ ತೂಗಿಕೊಳ್ಳುತ್ತಿದ್ದರೂ ಮನಸ್ಸು ಬೇರೆಲ್ಲೋ ಮಗ್ನವಾಗಿತ್ತು. ಮನಸ್ಸಿನಲ್ಲೇನೋ ಆತಂಕ, ಚಿಂತೆ, ಭಯ. ಇದೆಲ್ಲಾ ಆದದ್ದು ಆ ಕೊರವಂಜಿಯಿಂದ.

ಎಂದಿನಂತೆ ಅಂದೂ ಕೊಳದಲ್ಲಿ ಜಲಕ್ರೀಡೆಯಾಡಲು ಸಖಿಯರೊಡನೆ ವನಕ್ಕೆ ಬಂದಿದ್ದಳು. ಕ್ರೀಡೆ ಮುಗಿಸಿ ವಸ್ತ್ರಧರಿಸಿ ಇನ್ನೇನು ಅರಮನೆಗೆ ಹಿಂದಿರುಗಬೇಕೆಂದಿದ್ದಾಗ ಕಂಕುಳಲ್ಲಿ ಕಂದ, ತಲೆಯ ಮೇಲೆ ಗೂಡೆ, ಕೈಯ್ಯಲ್ಲಿ ಕಸುಬಿನ ದಂಡ ಹಿಡಿದು ಆ ಕೊರವಂಜಿ ಈ ಹರೆಯದ ಯುವತಿಯರನ್ನು ಸಮೀಪಿಸಿದ್ದಳು. ಎಲ್ಲರಿಗೂ ಮುಂದೆ ದೊರಕುವ ಬಾಳಸಂಗಾತಿ, ಸೇರುವ ಮನೆ, ಮುಂದಾಗುವ ಸಂತಾನಭಾಗ್ಯ ಇವುಗಳ ಬಗ್ಗೆ ತಿಳಿಯುವ ಕುತೂಹಲ. ಅವಳನ್ನು ಸುತ್ತುವರೆದು ತಮ್ಮತಮ್ಮ ಎಡಹಸ್ತ

